**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

DTE-ADMI0NSS/4/2020-JD-DEPT TECH

ಆಯುಕ್ತರ ಕಚೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು – 01
ದಿನಾಂಕ: 18/10/2022

**ಸುತ್ತೋಲೆ**

ವಿಷಯ: 2022ನೇ ಸಾಲಿನ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ "ಕೋಟಿ ಕಂಠ ಗಾಯನ" ಕಾರ್ಯಕ್ರಮದ ಬಗ್ಗೆ

ಉಲ್ಲೇಖ: 1. ಮುಖ್ಯ ಕಾರ್ಯದರ್ಶಿಯವರ ಕಚೇರಿಯ ಪತ್ರ ಸಂಖ್ಯೆ ಅ.ಸ.ಪ.ಸಂ.ಡಿಕೆಸಿ 33014:2022( ಭಾಗ-3) ದಿನಾಂಕ:13.10.2022

2. ಸರ್ಕಾರದ ಅಧೀನ ಕಾರ್ಯದರ್ಶಿಯವರು ( ವಿಶ್ವವಿದ್ಯಾಲಯಗಳು-2) ಉನ್ನತ ಶಿಕ್ಷಣ ಇಲಾಖೆ ಇವರ ಕಚೇರಿಯ ಪತ್ರ ಸಂಖ್ಯೆ ಇಡಿ 108 ವಿವಿಧ 2022 ದಿನಾಂಕ 15.10.2022

3. ಸರ್ಕಾರದ ಅಧೀನ ಕಾರ್ಯದರ್ಶಿಯವರು ( ವಿಶ್ವವಿದ್ಯಾಲಯಗಳು-2) ಉನ್ನತ ಶಿಕ್ಷಣ ಇಲಾಖೆ ಇವರ ಕಚೇರಿಯ ಪತ್ರ ಸಂಖ್ಯೆ ಇಡಿ 108 ವಿವಿಧ 2022 ದಿನಾಂಕ 18.10.2022

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ನಾಡು ನುಡಿಯ ಬಗ್ಗೆ ಅಭಿಮಾನವನ್ನು ಮೂಡಿಸುವ, ನಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಮೂಡಿಸುವ ಗೀತೆ ಕವನಗಳನ್ನು ನಾಡಿನ ಹೆಮ್ಮೆಯ ಕವಿಗಳು ರಚಿಸಿದ್ದು ಇವುಗಳ ಕೇಳುವಿಕೆಯು ನಮ್ಮಲ್ಲಿ ಅಭಿಮಾನವನ್ನು ಮೂಡಿಸುತ್ತದೆ. ಈ ದೃಷ್ಟಿಯಿಂದ ಈ ಗೀತೆಗಳು "ಕನ್ನಡದ ಶಕ್ತಿ". ಕಳೆದ ರಾಜ್ಯೋತ್ಸವದ ಸಂದರ್ಭದಲ್ಲಿ ಪ್ರಾತಿನಿಧಿಕವಾಗಿ ಆಯ್ದ ಮೂರು ಗೀತೆಗಳ ಸಮೂಹ ಗಾಯನವನ್ನು ವಿನೂತನವಾಗಿ "ಲಕ್ಷ ಕಂಠ ಗೀತಗಾಯನ". ಶೀರ್ಷಿಕೆ ಅಡಿ ರಾಜ್ಯದ್ಯಂತ ಆಯೋಜಿಸಿ ಯಶಸ್ವಿಗೊಳಿಸಿದ ನಿಟ್ಟಿನಲ್ಲಿ ಈ ವರ್ಷವೂ ಅಕ್ಟೋಬರ್ 28 ರಂದು "ಕೋಟಿ ಕಂಠ ಗೀತಗಾಯನ" ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಆಯೋಜಿಸಲಾಗುತ್ತಿದ್ದು ಈ ವಿಶೇಷ ಕಾರ್ಯಕ್ರಮದಲ್ಲಿ ಒಂದು ಕೋಟಿ ಜನರನ್ನು ಭಾಗಿಯಾಗಿಸಲು ಉದ್ದೇಶಿಸಲಾಗಿದೆ.

**1**. **ನನ್ನ ಹಾಡು ಗೀತ ಗಾಯನ ಅಕ್ಟೋಬರ್ 28ರಂದು ಶುಕ್ರವಾರ ಕನ್ನಡ ನಾಡ ನುಡಿಯ ಶ್ರೇಷ್ಠತೆಯನ್ನು ಸಾರುವ**

1. ನಾಡಗೀತೆ
2. ಹೂಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'
3. ರಾಷ್ಟ್ರಕವಿ ಕುವೆಂಪುರವರ 'ಬಾರಿಸು ಕನ್ನಡ ಡಿಂಡಿಮವ'
4. ಡಾ. ಡಿ.ಎಸ್ ಕರ್ಕಿ ಅವರ 'ಹಚ್ಚೇವು ಕನ್ನಡದ ದೀಪ'
5. ನಾಡೋಜ ಡಾ. ಚನ್ನವೀರ ಕಣವಿ ಅವರ 'ವಿಶ್ವವಿನೂತನ ವಿದ್ಯಾಚೇತನ'
6. ಡಾ. ಹಂಸಲೇಖ ಅವರ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು'

**2**.ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವವರು (ಸಂಸ್ಥೆಯಾಗಲಿ/ವ್ಯಕ್ತಿಯಾಗಲಿ) ಅಕ್ಟೋಬರ್ 28ರ ವರೆಗೆ https://kannadasiri.karnataka.gov.in/kkg/public/ ಕೊಂಡಿಯ ಮೂಲಕ ನೋಂದಾಯಿಸಬಹುದಾಗಿದ್ದು, ನೋಂದಾಯಿಸಿ ಭಾಗವಹಿಸುವವರೆಲ್ಲರಿಗೂ ಸ್ವಯಂ ಚಾಲಿತ ಆನ್ಲೈನ್ ಪ್ರಮಾಣ ಪತ್ರ ಲಭಿಸಲಿದೆ.

ಹಾಡುಗಳ ಸಾಹಿತ್ಯ ಹಾಗೂ ಧಾಟಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಯೂಟ್ಯೂಬ್ ಚಾನೆಲ್ ನಲ್ಲಿ ವೀಕ್ಷಿಸಬಹುದಾಗಿದೆ. ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ "ಕೋಟಿ ಕಂಠ ಗಾಯನ"ವನ್ನು ಅಗತ್ಯ ಪೂರ್ವಸಿದ್ಧತೆಯೊಂದಿಗೆ ದಿನಾಂಕ 28.10.2022 ರಂದು ಬೆಳಗ್ಗೆ 11:00 ಗಂಟೆಗೆ ಹೆಚ್ಚಿನ ಸಂಖ್ಯೆಯ ಭಾಗವಹಿಸುವಿಕೆಯೊಂದಿಗೆ ಅರ್ಥಪೂರ್ಣವಾಗಿ ಆಯೋಜಿಸಲು ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

18/10/22

**ಜಂಟಿ ನಿರ್ದೇಶಕರು(ಆಡಳಿತ)**
ತಾಂತ್ರಿಕ ಶಿಕ್ಷಣ ಇಲಾಖೆ